International Journal of Kannada Research
www.kannadajournal.com

ISSN: 2454–5813
IJKR 2020; 6(1): 24-27
© 2020 IJKR
www.kannadajournal.com
Received: 13-11-2019
Accepted: 15-12-2019

**ರಂಗಸ್ವಾಮಿ ಕೆ**
ಸಂಶೋಧನಾ ವಿಧ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

**ಡಾ. ಎಂ ಕೆ ದೇವಪ್ಪ**
ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜ್
ಅರೇಹಳ್ಳಿ, ಬೇಲೂರು ತಾ

**Corresponding Author:**
**ರಂಗಸ್ವಾಮಿ ಕೆ**
ಸಂಶೋಧನಾ ವಿಧ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

# ಕರ್ನಾಟಕದ ರಾಜ್ಯದಲ್ಲಿ ಕುರುಬ ಸಮುದಾಯ

**ರಂಗಸ್ವಾಮಿ ಕೆ, ಡಾ. ಎಂ ಕೆ ದೇವಪ್ಪ**

ಪಶುಪಾಲನೆ ಮತ್ತು ಕೃಷಿಯನ್ನು ಪ್ರಮುಖ ವೃತ್ತಿಯನ್ನಾಗಿ ಅವಲಂಬಿಸಿದ್ದ ಕುರುಬರು ಕಾಲಕ್ರಮೇಣ ರಾಜಕೀಯದಲ್ಲ ಆಸಕ್ತಿವಹಿಸಿದರು. ಪ್ರಾಚೀನ ಮರವ ಜನಾಂಗಕ್ಕೆ ಸೇರಿದವರಾಗಿದ್ದರೆಂದು ಹೇಳಿಕೊಳ್ಳುತ್ತಿದ್ದ ಸೂತಪತಿಗಳು ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಅವರನ್ನು ಸೋಲಿಸಿ ಕುರುಬರು ರಾಜ್ಯವನ್ನು ವಶಪಡಿಸಿಕೊಂಡರು. 'ಪುಲಾಲದ ರಾಜ' ಎಂದು ಕರೆಯಿಸಿಕೊಂಡ ದ್ರಾವಿಡ ದೇಶದ ಅಧಿಪತಿಯಾದ ಕುರುಬ ಮುಖಂಡನನ್ನು ' ಕಾಮಂಡ ಕುರುಬ ಪ್ರಭು' ಎಂದು ಕರೆಯುತ್ತಿದ್ದರು ನಂತರ ಅನೇಕ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾ ರಾಜವಂಶಗಳನ್ನು ಸ್ಥಾಪಿಸಿದರು. ಹೀಗೆ ದಕ್ಷಿಣ ಭಾರತದ ರಾಜಕೀಯ ಚರಿತ್ರೆಯಲ್ಲಿ ಸ್ಥಾನ ಪಡೆದುಕೊಳ್ಳುವತ್ತ ಹೆಜ್ಜೆ ಹಾಕಲಾರಂಭಿಸಿತು. ಇದನ್ನು ಸರ್ ಡಬ್ಲೂ ಎಲಿಯಟ್ಟ ಅವರು.

"The kurubas one of the most important elements in theearly population of South India. They appear as kurumban's in Tamil and Malayali, as kurubas in kanarase . . . In early times in the east karanatak they are said to have firmul a Federal community of twenty four states, to have been converted to Buddism to have gained Much skill in the arts and to have been overthrow by a cholo kings of Tanjore in the fifth or sixth century". . .

ಏಳನೇಯ ಶತಮಾನದಲ್ಲಿ ದಕ್ಷಿಣ ಭಾರತದ ಪ್ರಬಲ ಅರಸು ಮನೆತನವಾದ ಪಲ್ಲವರ ಆಧುನಿಕ ಪ್ರತಿನಿಧಿಗಳು ಕುರುವರು. ಗೋವಾ ಪ್ರಾಂತ್ಯದಲ್ಲಿ ಇವರನ್ನು ಕುರುಚಿ ಎಂದು ಕರೆಯುವರು. ತಮಿಳು ನಿಘಂಟು ಬರೆದ ಸಿಂಗಳಮುನಿ ಕುರುಂಬನ್ ಎನ್ನುವುದಕ್ಕೆ "ಕುರು ನಿಲುಮನ್ನಾರ್" ಎಂಬ ಅರ್ಥ ನೀಡಿದ್ದಾನೆ. ಕುರುಂಬರ್ ನಾಡು ಮಲಬಾರ್ ತೀರದಲ್ಲಿ ಪ್ರಸಿದ್ಧವಾಗಿದೆ. ಆ ನಾಡಿನ ಚೆರುಮಾನ್ ಪೆರುಮಾಳ್ ಎಂಬುವನು ಮಲೆಯಾಳ ದೇಶವನ್ನೆಲ್ಲಾ ಅಧೀನಕ್ಕೆ ತೆಗೆದುಕೊಂಡು ಅಸಂಖ್ಯಾತ ಸಾಮಂತ ರಾಜರುಗಳನ್ನು ನಾಲ್ಕು ಭಾಗಗಳನ್ನಾಗಿ ಮಾಡಿದನು. ಅವುಗಳೆಂದರೆ, ಕೊಲಟನಾಡು, ವೆನೇತ್ರ(ತಿರುವಾಂಕೂರು) ಪೆರಂಬೂರು (ಕೊಚ್ಚಿ) ಎರ್ನಾಡು (ಕುಮಲಿ) ಇವರ ಸಾಮ್ರಾಜ್ಯ ವಿಸ್ತರವಾಗಿತ್ತು. ನೀರಂಪೂರು ಮತ್ತು ಸಾಲಪಾಕ್ಕಂ ಎಂಬ ಪಟ್ಟಣಗಳಲ್ಲಿ ಆಳುತ್ತಿದ್ದ ಕುರುಬರಾಜರು 24 ಕೋಟೆಗಳನ್ನು ಕಟ್ಟಿಕೊಂಡು ಆಳ್ವಿಕೆ ನಡೆಸಿದರೆಂದು ಹೇಳಲಾಗಿದೆ.

ದಕ್ಷಿಣ ಭಾರತದಲ್ಲಿ ಅತ್ಯಂತ ವೈಭವದಿಂದ ರಾಜ್ಯಭಾರ ಮಾಡಿದ ಪ್ರಾಚೀನ ಅರಸರೆಂದರೆ ಪಲ್ಲವರು. ಇವರ ಮೂಲ ಪುರುಷರು ಪ್ರಾಚೀನ ತೊಂಡೆ ಮಂಡಲ ಪ್ರದೇಶದಲ್ಲಿದ್ದ ಕುರುಬರು ಎಂದು ಹೇಳಲಾಗಿದೆ. ಇವರು ಕ್ರಿ.ಶ.ಸು. 4ನೇ ಶತಮಾನದಿಂದ 8ನೇ ಶತಮಾನದವರೆಗೆ ದಕ್ಷಿಣ ಭಾರತದ ರಾಜಕೀಯ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ್ದರು. ತೊಂಡೆ ಮಂಡಲವು ಉತ್ತರ ಪೆನ್ನಾರ್ ಮತ್ತು ಉತ್ತರ ವೇಲಾರ್ ನದಿಗಳ ಪ್ರದೇಶದ ನಡುವೆ ಬರುತ್ತದೆ. ಇದನ್ನು ಕುರುಂಬ ಭೂಮಿ, ಕುರುಂಬನಾಡು ಎಂದು ಕರೆಯಲಾಗಿದ್ದಿತು ಇದರ ರಾಜ್ಯವನ್ನು ಚೋಳರಾಜರು ವಶಪಡಿಸಿಕೊಂಡರು. ಹೀಗೆ ಚೋಳರಿಂದ ಸೋಲಿಸಲ್ಪಟ್ಟ ಕುರುಂಬರೇ ಇಂದಿನ ನೀಲಗಿರಿ, ವೈನಾಡು, ಹೆಗ್ಗಡದೇವನಕೋಟೆ,

ಗುಂಡ್ಲು ಪೇಟೆ, ಹುಣಸೂರು ಪ್ರದೇಶಗಳಲ್ಲಿ ಕಾಣಿಸುತ್ತಿರುವ ಗಿರಿಜನರು ಎಂದು ಮಾನವಶಾಸ್ತ್ರಜ್ಞರು ಗುರುತಿಸಿದ್ದಾರೆ.

ವಿಜಯನಗರ ಪಟ್ಟಣ ಇತಿಹಾಸ : ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಅಗ್ರಗಣ್ಯ ಸ್ಥಾನವಿದೆ. ಈ ರಾಜ್ಯವು ಕ್ರಿ.ಶ. 1336 ರಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲೆ ಸ್ಥಾಪನೆಯಾಯಿತು. ಇದನ್ನು ಸಂಗಮನ ಮಕ್ಕಳಾದ ಹರಿಹರ ಬುಕ್ಕರು ಸ್ಥಾಪಿಸಿರುವುದು

ಐತಿಹಾಸಿಕ ಸತ್ಯವಾಗಿದೆ. ಇವರು ಮೂಲತಃ ಕುರುಬ ಜಾತಿಗೆ ಸೇರಿದ್ದರೂ ನಂತರದಲ್ಲಿ ಕ್ಷತ್ರಿಯರಾಗಿ ರಾಜ್ಯವಾಳಿದರು. ಏಕೆಂದರೆ ಅಂದಿನ ಸಂದರ್ಭದಲ್ಲಿ ಇಂತಹ ಅನಿವಾರ್ಯತೆ ಅವರಿಗಿತ್ತು. ಅಂದು ಅವರ ಬಳಿ ಎಷ್ಟೇ ಅಂತಸ್ತು ಇದ್ದರೂ ಅವರನ್ನು ಜಾತಿಯ ಅಂತಸ್ತಿನಿಂದ ಗುರುತಿಸಲಾಗುತ್ತಿತ್ತು ಹಿನ್ನೆಲೆಯಲ್ಲಿ ಅವರು ಕ್ಷತ್ರಿಯರಾಗಿ ಬಾಳಿರಬಹುದು. ನಂತರ ಅವರು ತಮ್ಮ ಮೂಲದ ಬಗ್ಗೆ ವಿವಿಧ ಬಗೆಯ ಶ್ರೇಷ್ಠ ಕುಲದ ಕಟ್ಟು ಕಥೆಗಳನ್ನು ಸೃಷ್ಟಿಸಲ್ಪಟ್ಟಿರಬಹುದೆನ್ನಬಹುದು.

ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಹರಿಹರ ಮತ್ತು ಬುಕ್ಕರು ಎಂಬ ವಿಚಾರ ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಇವರು ವಿಜಯನಗರ ಸಾಮ್ರಾಜ್ಯವನ್ನಾಳಿದ ಮೊದಲ ವಂಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸಂಗಮ ವಂಶದವರು. ಈ ಸಂಗಮ ಹರಿಹರ ಮತ್ತು ಬುಕ್ಕನ ತಂದೆ ಹರಿಹರ ಮತ್ತು ಬುಕ್ಕ ತಾವು ತಮ್ಮ ತಂದೆ ಸಂಗಮ ವಂಶದವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವರು. ಈ ಸಂಗಮ ಕುರುಬ ಜನಾಂಗದ ವೀರ. ಇವನು ಕಂಪಿಲ ದೊರೆಯ ಸೇನಾ ದಂಡನಾಯಕನಾಗಿದ್ದನು. ಚಕ್ರವರ್ತಿಯ ಪುತ್ರಿ ಕಾಮಾಂಬಿಕೆಯನ್ನು ಮದುವೆಯಾಗಿ ಇವಳಿಂದ ಬುಕ್ಕಣ್ಣ,ಕಂಪಣ್ಣ, ಮುದ್ದಪ್ಪ, ಮಾರಪ್ಪ, ಎಂಬ ನಾಲ್ಕು ಗಂಡು ಮಕ್ಕಳನ್ನು ತನ್ನ ಮತ್ತೊಬ್ಬ ಪತ್ನಿಯಿಂದ ಹುಕ್ಕ (ಹರಿಹರ) ನನ್ನ ಪಡೆದಿದ್ದ. ಹೀಗಾಗಿ ಅವನಿಗೆ ಐದು ಜನ ಗಂಡು ಮಕ್ಕಳು. ಇವರು ಕುರುಬರೆಂದು ಹೇಳಲು ಸಾಕಷ್ಟು ಆಧಾರಗಳು ಇದುವರೆಗೆ ಲಭ್ಯವಾಗಿದೆ. ರಾಬರ್ಟ್ ಸೀವೆಲ್ಲರೂ ತಮ್ಮ ಕೃತಿಯಲ್ಲಿ ದಾಖಲಿಸಿರುವಂತೆ.

"ಸನ್ಯಾಸಿ ಮಾಧವನ ಗುಪ್ತ ನಿಧಿಯ ಶೋಧದ ನಂತರ ವಿಜಯನಗರವನ್ನು ಸಂಸ್ಥಾಪಿಸಿದನೆಂದೂ ಅದನ್ನು ತಾನೇ ಆಳಿದನೆಂದೂ ಮತ್ತು ತನ್ನ ಮರಣಾನಂತರ ಅದನ್ನು ಒಂದು ಕುರುಬ ಮನೆತನಕ್ಕೆ ಬಿಟ್ಟು ಹೋದನೆಂದು ಅವರೇ ಕ್ರಮಬದ್ಧ ರಾಜವಂಶವನ್ನು ಸ್ಥಾಪಿಸಿದರೆಂದೂ ಹೇಳಲಾಗಿದೆ. ವಿಜಯನಗರ ಸಮ್ರಾಜ್ಯದ ಸಂಸ್ಥಾಪಕ ಹುಕ್ಕ ಮತ್ತು ಬುಕ್ಕರ ಜಾತಿಯನ್ನು ಕುರಿತಂತೆ ಕೌಟೋ ಹೇಳಿರುವ ಕತೆಯೊಂದು ಹೀಗಿದೆ.'

"ಪರ್ವತಗಳಲ್ಲಿ ಮಾಧವ ಸನ್ಯಾಸಿ ಜೀವನ ನಡೆಸುತ್ತಿದ್ದಾಗ ಬುಕ್ಕನೆಂಬ ಬಡಕುರುಬ ತಂದು ಕೊಡುತ್ತಿದ್ದ ಊಟಗಳೇ ಅವನ ಆಧಾರವಾಗಿದ್ದವು ಮತ್ತು ಒಂದು ದಿನ ಬ್ರಾಹ್ಮಣನು ನೀನು ಇಡೀ ಹಿಂದೂಸ್ಥಾನದ ರಾಜ ಮತ್ತು ಸಾಮ್ರಾಟನಾಗುವಿ ಎಂದು ಆತನಿಗೆ ಹೇಳಿದನು. ಉಳಿದ ಕುರುಬರಿಗೆ ಇದು ತಿಳಿದು ಆ ಕುರುಬನನ್ನು ಭಕ್ತಿಯಿಂದ ಕಾಣತೊಡಗಿದರು ಮತ್ತು ಅವನನ್ನು ತಮ್ಮ ಮುಖ್ಯಸ್ಥನನ್ನಾಗಿ ಮಾಡುಕೊಂಡರು. ಅವನು ರಾಜ ಎಂಬ ಹೆಸರು ಸಂಪಾದಿಸಿದ ಮತ್ತು ಕ್ಯಾನರಾ, ತಳಿಗರು, ಕಾಂಲ್ವಿವರಾವ್, ನೆಗಪತಾ ಓ, ತನ್ನದೇ ಬಡಗರು ಹೀಗೆ ಐದು ನೆರೆಯವರನ್ನು ಗೆಲ್ಲತೊಡಗಿದನು ಮತ್ತು ಕೊನೆಗೆ ಎಲ್ಲರ ಪ್ರಭುವಾದನು. ತನ್ನನ್ನು ಬೊಕ್ಕರಾವ್ ಎಂದು ಕರೆದುಕೊಂಡನು. ದಿಲ್ಲಿಯ ರಾಜ ಅವನ ಮೇಲೆ ದಾಳಿಯಿಟ್ಟ ಅದರೆ ಸೋತು ಹಿಂತಿರುಗಿದ ಆ ಕಾರಣದಿಂದ ಬುಕ್ಕ ಒಂದು ನಗರವನ್ನು ಸ್ಥಾಪಿಸಿದ ಮತ್ತು ಅದನ್ನು ವಿಜಯನಗರದ ಎಂದು ಕರೆದ. ನಾವು ಆ ರಾಜ್ಯವನ್ನೆಲ್ಲಾ ಆ ಹೆಸರಿನಿಂದ ಕರೆಯುತ್ತೇವೆ. ಆದರೆ ನಾಡಿಗರು ಯಾವಾಗಲೂ ಅದನ್ನ ಕ್ಯಾನರಾದ ರಾಜ್ಯ ಎಂದು ಕರೆಯುತ್ತಾರೆ."

"ಮಹಾನ್ ರಾಜ್ಯದ ಹುಟ್ಟಿನ ಬಗೆಗೆ ಪರಿಗಣಿಸಲು ಮತ್ತು ನಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಲು ಕತೆಗಳ ಮತ್ತು ವಾಡಿಕೆಗಳ ಕಂತೆಯೇ ಲಭ್ಯವಿದೆ. ಇನ್ನು ಅನೇಕ ಕತೆಗಳು ಉಂಟು. ಬಹುಶಃ ಅತ್ಯಂತ ಯುಕ್ತಾಯುಕ್ತ ವೃತ್ತಾಂತವೆಂದರೆ, ಹಿಂದೂಗಳ ಸಾಮಾನ್ಯ ಒಲವಿನ ದಂತಕತೆಗಳಿಂದ ಆಯ್ದುಕೊಂಡು ಅದನ್ನು ಐತಿಹಾಸಿಕ ಸಂಗತಿಗಳಲ್ಲಿ ನಿಶ್ಚಿತತೆಯೊಂದಿಗೆ ಸಂಯೋಜಿಸಿದ್ದುದು ಈ ದೃಷ್ಟಿಯಿಂದ ನಾವು ಸದ್ಯಕ್ಕೆ ಭಾವಿಸಬಹುದಾದುದೇನೆಂದರೆ ಅವರಿಬ್ಬರು ಸಹೋದರರು ಕುರುಬ ಜಾತಿಯ ಹಿಂದೂಗಳಾಗಿದ್ದರು" ಎಂದು ಸೀವೆಲ್ ಅಭಿಪ್ರಾಯಪಟ್ಟಿದ್ದಾನೆ. ಈ ಕೃತಿಗಿಂತಲೂ ಪೂರ್ವದಲ್ಲೇ ರಚನೆಯಾಗಿದ್ದ ಕೆಲವು ಸಾಹಿತ್ಯ ಕೃತಿಗಳು ವಿಜಯನಗರ ಕಟ್ಟಿದ ಮೇಲೆ ಮೂಲ ಪುರುಷರ ಸಮುದಾಯದ ಬಗ್ಗೆ ನಿಖರವಾದ ಮಾಹಿತಿ ನೀಡಿವೆ. ಅವುಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

1. ತಿರುಮಲಾರ್ಯನ ಚಿಕ್ಕದೇವರಾಜ ವಂಶವಾಳಿ ಕೃತಿಯಲ್ಲಿ

"ಅತ್ತಲುತ್ತರ ದೇಶದೊಳ್ ತುಂಭದ್ರಾ ತೀರದೊಳ್ ವಿದ್ಯಾನಗರಿಯನಾಳ್ದ ಹರಿಹರಬುಕ್ಕ ಮೊದಲಾದ ಕುರುಂಬರಾಯರ ಅನಂತರದೊಳ್ ಅರಸುಗೆಯ್ದು ತುಳುವ ಕುಳಾಧೀಶ್ವರ ನರಸವೀರ ನರಸಿಂಹ ಕೃಷ್ಣಾ ಚ್ಯುತರೆಂಬ ರಾಯದೈವರು ."

2. ದೇವಚಂದ್ರ ಕವಿಯ ರಾಜಾವಳಿ ಕಥಾಸಾರದಲ್ಲಿ

. . . ಉತ್ತರ ದೇಶದ ತುಂಗಭದ್ರಾ ತಡದೊಳ್ ರಾಜಿಸುತ್ತಿಪ್ಪ ವಿಧ್ಯಾನಗರಿಯನಾಳ್ವ ಹರಿಹರ ವೀರಭುಕ್ಕರ್ ಮೊದಲಾದ ಕುರುಂಬಾಯರಿಂದಿತ್ತ . . .

3. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತಾಳೀಕಟ್ಟೆ ಗ್ರಾಮದ ಚೀರಲಿಂಗೇಶ್ವರ ದೇಗುಲದ ಆವರಣದಲ್ಲಿನ ಶಿಲಾಶಾಸನವು ಈ ರೀತಿ ಉಲ್ಲೇಖಿಸಿದೆ.

"ಶ್ರೀ ಗಡದ ದೇವರಾಯ। ಬೋಜರಾಯ । ಮಲ್ಲರಾಯ । ದೊಡಾರಾಯ। ಬುಕರೆಯ। ಜೋಗರೆಯ। ವಿತಾ ಕುರುಬರಾಯರು ಆಳಿದರು । ರಾಮರಾಜ। ಯಕಟರಾಯರು। ತಾಳವಾರತಿರುಮಲಾರಾಜಾ। ದಳವಾಯಿ ಜಗಾಮೈಯ । ಈ ವಿಜಯನಗರವ ಆಳಿದರು।"

4. ಕುರುಬರಲ್ಲಿ ಒಟ್ಟು 877 ಬೆಡುಗುಗಳನ್ನು ಪತ್ತೆ ಹಚ್ಚಿ ಸಂಗ್ರಹಿಸಲಾಗಿದೆ ಇವುಗಳಲ್ಲಿ ಸಂಗಮ ಎಂಬದೂ ಕೂಡಾ ಸೇರಿದೆ. ಆದುದರಿಂದ ವಿಜಯನಗರ ಸಾಮ್ರಾಜ್ಯವನ್ನಾಳಿದ ಮೊದಲ ಕುಲ ಸಂಗಮವಾಗಿರುವುದರಿಂದ ಮತ್ತು ಆ ಕುಲದ ಹರಿಹರ ಮತ್ತು ಬುಕ್ಕರು ಮೊದಲ ದೊರೆ ಹಾಗೂ ಸಂಸ್ಥಾಪಕರು. ಇದರಿಂದ ವಿಜಯನಗರದ ಸ್ಥಾಪಕರ ಮೂಲ ಸಮುದಾಯ 'ಕುರುಬ' ಎಂದೇ ಹೇಳಲು ಸಾಧ್ಯವಿದೆ.

**5. ಲಿಂಗಣ್ಣ ಕವಿಯ ಕೆಳದಿನೃಪ ವಿಜಯದಲ್ಲಿ**

"... ಆ ಸ್ವಪ್ನಾರ್ಥವಂ ಮನದೊಳಿಟ್ಟು ಕತಿಪಯ ದಿವಸಂ ವರ್ತಿಸುತ್ತು ಮಿರಲಾಗಿ ಯುತ್ತರ ದೇಶದಿಂದ ಸಹೋದರರಾದ ಹರಿಹರ ಬುಕ್ಕರೆಂಬ ಬಡ ಕ್ಷತ್ರಿಯರು ಈ ದಕ್ಷಿಣ ರಾಜ್ಯಕ್ಕೆ ತಂದು ಕುರುಬರಲ್ಲಿ ನಂಟತನವಂ ಮಾಡಿ ಹೆಣ್ಣು ತಂದು ಮದುವೆಯಾಗಿ ಸುಖವಾಸಿಗಳಾಗಿರುತ್ತು ಮಿರಲಾಗಿ ..."

ಈ ಎಲ್ಲಾ ದಾಖಲೆಗಳು ಹರಿಹರ ಬುಕ್ಕರನ್ನು ಕುರುಬ ಜಾತಿಗೆ ಸೇರಿದವರೆಂದು ತಿಳಿಸುವುದರಿಂದ ನಿಸ್ಸಂದೇಹವಾಗಿ ವಿಜಯನಗರ ಸಾಮ್ರಾಜ್ಯವನ್ನಾಳಿದ ಮೊದಲ ಮನೆತನವಾಗಿದ್ದ ಸಂಗಮ ಮೊದಲ ದೊರೆಗಳು ಕುರುಬರು. ಕ್ರಮೇಣ ಅವರು ತಮ್ಮ ವೃತ್ತಿಯಿಂದ ಅಂತಸ್ತನ್ನು ಹೆಚ್ಚಿಸಿಕೊಂಡು ಕ್ಷತ್ರಿಯರಾದರು. ಬಹುದೊಡ್ಡ ರಾಜ್ಯ ನಿರ್ಮಾಣ ಮಾಡಿದ ಮೇಲೆ 150 ವರ್ಷಗಳ ಕಾಲ ರಾಜ್ಯವಾಳಿದರು. ಆ ಅವಧಿಯಲ್ಲಿ ಇಮ್ಮಡಿ ಹರಿಹರ, ಒಂದನೇ ದೇವರಾಯ, ಇಮ್ಮಡಿ ದೇವರಾಯ, ಮಲ್ಲಿಕಾರ್ಜುನ ವಿರುಪಾಕ್ಷ ಮೊದಲಾದ ರಾಜರು ಆಳಿದರು. ಈ ರೀತಿ ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರ ಮೂಲ ಜಾತಿ ಕುರುಬ ಸಮುದಾಯವಾಗಿದ್ದು ಮಧ್ಯೆ ಅವರು ತಮ್ಮ ವೃತ್ತಿಯಿಂದ ಕ್ಷತ್ರಿಯರಾಗಿ ಇಡೀ ದಕ್ಷಿಣ ಭಾರತವನ್ನೇ ವ್ಯಾಪಿಸುವ ಬೃಹತ್ ಪ್ರಮಾಣದ ಸಾಮ್ರಾಜ್ಯವನ್ನು ನಂತರದ ಚಕ್ರವತಿಗಳು ನಿರ್ಮಿಸಿದರು ಎಂದು ಹೇಳಬಹುದು.

ಬಳ್ಳಾರಿ ಪಾಳೆಯಗಾರರು: ಇನ್ನೂ ಪರಿಪೂರ್ಣವಾಗಿರದ ಬಳ್ಳಾರಿ ಪಾಳೆಯಗಾರರ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ಕಟ್ಟುವಲ್ಲಿ ಶಾಸನಗಳು, ಕೈಫಿಯತ್ತುಗಳು, ಸಾಹಿತ್ಯ ಕೃತಿಗಳು ದೊರೆತಿದ್ದರೂ ಈ ದಾಖಲೆಗಳಲ್ಲಿ ಅಸ್ಪಷ್ಟತೆಯಿರುವುದು ಕಂಡು ಬರುತ್ತದೆ. ಇವುಗಳನ್ನೇ ಪರಿಶೀಲಿಸಿ, ವಿಶ್ಲೇಷಿಸಿ ಬಳ್ಳಾರಿ ಪಾಳೆಯಗಾರರು ಯಾರು? ಎಲ್ಲಿಂದ ಬಂದವರು?

ಸಾಧನೆಗಳ ಪರಿಚಯ ಮಾಡಿಸಬೇಕಾಗುತ್ತದೆ.

ಹಂಡೆ ಅನಂತಪುರದ ಕೈಫಿಯತ್ತಿನ ಪ್ರಕಾರ ಬಾಗೇವಾಡಿ ವಿಭಾಗದ ಮುತ್ತಿಗೆ ಹಾಗೂ ವಡವಡಿಗೆಗಳಲ್ಲಿ ಲಕ್ಕಿ ನಾಯಕನು ಬಳ್ಳಾರಿ ಪಾಳೆಯಗಾರರ ಮೂಲ ಪುರುಷನಾಗಿದ್ದಾನೆ. ಇವನ ಮಕ್ಕಳು ಬಾಲದ ಹನುಮಪ್ಪನಾಯಕ ಹಾಗೂ ಬಳಗ ನಾಯಕ, ಬಾಲದ ಹನುಮಪ್ಪ ನಾಯಕನ ಮತ್ತು ಅವನ ಮುಂದಿನ ವಂಶಜರು ಬಳ್ಳಾರಿಯನ್ನು ಕೇಂದ್ರವಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರನ್ನೇ ಮುಂದೆ ಬಳ್ಳಾರಿ ಪಾಳೆಯಗಾರರು ಎಂದು ಗುರ್ತಿಸಲಾಗಿದೆ. ಕುರುಗೋಡು ಕೈಫಿಯತ್ತು ಬಳ್ಳಾರಿ ಪಾಳೆಯಗಾರರ ಮೂಲ ಪುರುಷನಾದ ಬಾಲದ ಹನುಮಪ್ಪ ನಾಯಕನು ವಿಜಾಪುರದ ಬಾದಷಹಾನಲ್ಲಿ ಸರದಾರನಾಗಿದ್ದು, ಹಂಡೆ ಕುರುಬರ ಜಾತಿಗೆ ಸೇರಿದ್ದು, ಮುತ್ತಿಗೆ ಗ್ರಾಮದವನೆಂದು ಹೇಳುತ್ತದೆ. ವಿಜಾಪುರದ ಬಾದಶಹನಲ್ಲಿ ಬಿಜಾಪುರದ ಸೀಮೆಯಲ್ಲಿ ಮುತ್ತಿಗೆಯಂಬೋ ಗ್ರಾಮದ ಗೌಡ ಹಂಡೆ ಕುರುಬರ ವಂಶಸ್ಥ ಹಂಡೆ ಬಾಲದ ಹನುಮಪ್ಪ ನಾಯಕಯಂಬುವನು ವಿಜಾಪುರದ ಬಾದಶಹಾನಲ್ಲಿ ಸರದಾರನಾಗಿ ಇದ್ದ, ಅಲ್ಲಿಂದ ಬಾದಷಹಾನು ಈತನನ್ನು ದಕ್ಷಿಣ ಭಾಗದಲ್ಲಿ ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಬಂಕಾಪುರವನ್ನು ಜಹಗೀರಾಗಿ ಕೊಟ್ಟು ಕ್ರಿ.ಶ. 1588 ರಲ್ಲಿ ಕಳುಹಿಸಿದನೆಂದು ಅದೇ ಕುರುಗೋಡು ಕೈಫಿಯತ್ತು ಹೇಳುತ್ತದೆ. ಒಟ್ಟಾರೆ ಹೇಳುವುದಾದರೆ ಬಳ್ಳಾರಿ ಪಾಳೆಯಗಾರರು ಹಂಡೆ ಕುರುಬ ಜಾತಿಗೆ ಸೇರಿದವರಾಗಿದ್ದರೆಂದು ಈ ಕೈಫಿಯತ್ತಿನ ಪ್ರಕಾರ ಹೇಳಬಹುದು.

ಈ ಅಭಿಪ್ರಾಯವನ್ನೇ ಬಳ್ಳಾರಿ ಕೈಫಿಯತ್ತು ಎತ್ತಿ ಹಿಡಿಯುತ್ತದೆ. ಅದರ ಪ್ರಕಾರ

ಬೀಜಾಪುರ ದೇಶದಲ್ಲಿ ಕೃಷ್ಣ ನದಿಗೆ ಉತ್ತರ ಭಾಗದಲ್ಲಿರುವ ಮೂರ್ತಿಗಿರಿ ಎಂಬ ಗ್ರಾಮದಲ್ಲಿ ಹಂಡೆ ಕುರುಬ ಜಾತಿಯವರು ಗೌಡಿಕೆ ಮಾಡಿಕೊಂಡು ಇದ್ದರು. ಅವರ ಸಂತತಿಯ ಬಾಲದ ಹನುಮಪ್ಪ ನಾಯಕನು ಪ್ರತಿ ದಿನದಲ್ಲಿಯೂ ದೇವರ ಅನುಗ್ರಹದಿಂದ ಬುದ್ಧಿವಂತ ನೆನಿಸಿಕೊಂಡು ಬಿಜಾಪುರದ ಪಾದುಶಾರವರ ಅನುಗ್ರಹವನ್ನು ಸಂಪಾದಿಸಿದುದರಿಂದ ಆತನಿಗೆ ಪೌಜುದಾರಿ ಮೊಕರೂರ್ ಮಡಿಕೊಟ್ಟರು. ಕೆಲವು ದಿವಸ ಆ ಕೆಸದಲ್ಲಿದ್ದು ಒಂದೆರೆಡು ಸ್ವಾಮಿಕಾರ್ಯದಲ್ಲಿ ಮೆಹನತ್ತು ಮಾಡಿದ್ದು ಕಂಡುಬಂದು ಪಾದುಷಾಹರವರು ವಜೀರಪ್ಪ ಸಹಿ ಎಂಬ ಕಿತಾಬು ಕೊಟ್ಟರು. ಆ ತರುವಾಯ ಕರ್ನಾಟಕ ದೇಶವು ಅರಾಜಕದಿಂದ ಹಾಳಾಗಿರಲಾಗಿ ಈ ಬಾಲದ ಹನುಮಪ್ಪನಾಯಕನನ್ನು ಕಳುಹಿಸದರೆ ರಾಜ್ಯ ಬಸ್ತಿ ಅದೀತೆಂದು ಪಾದುಷಹಾರವರು ತಿಳಿದು ಕೆಲವು ಪೌಜು ಕೊಟ್ಟು ಈ ದಕ್ಷಿಣ ಪ್ರಾಂತ್ಯಕ್ಕೆ ಕಳುಹಿಸಿದರು. ... ಬಾಲದ ಹನುಮಪ್ಪ ನಾಯಕನು ಬಂಕಾಪುರಕ್ಕೆ ಬಂದು ಕಿಲ್ಲೆ ಕಟ್ಟಿಸಿ ಆ ರಾಜ್ಯ ಬಸ್ತಿಮಾಡಿ ಅಲ್ಲಿಂದ ತುಂಗಭದ್ರಾ ಮಹಾನದಿಯನ್ನು ದಾಟಿ ಈ ಸೀಮೆಗೆ ಬಂದು ಬಳ್ಳಾರಿಯ ಗುಡ್ಡಕ್ಕೆ ಪೂರ್ವ ಭಾಗದಲ್ಲಿ ಗುಡ್ಡದ ಮೇಲೆ ಕಿಲ್ಲೆ ಕಟ್ಟಿಸಿ ಅಲ್ಲೇ ಮುಕ್ಕಾಂ ಮಾಡಿಕೊಂಡು ಸುತ್ತ ಮುತ್ತಲ ಗ್ರಾಮಗಳನ್ನು ತನ್ನ ಕಕ್ಷೆಗೆ ಒಳಪಡಿಸಿಕೊಂಡು ಆಳ್ವಿಕೆ ನಡೆಯಿಸಿದನೆಂದು ತಿಳಿಸುತ್ತದೆ,"

ಕೈಫಿಯತ್ತುಗಳಲ್ಲಿಯ ಈ ಪಾಳೆಯಗಾರರ ಮೂಲ ವ್ಯಕ್ತಿಗಳ ಚರಿತ್ರೆಯನ್ನು ಸ್ಥಿರೀಕರಿಸುವ ಅಂಶಗಳು ಶಾಸನಗಳಲ್ಲಿ ಕಂಡುಬರದಿದ್ದರೂ ಆರಂಭಿಕ ಪಾಳೆಯಗಾರರ ಹೆಸರುಗಳು ಮಾತ್ರ ಲಭ್ಯವಾಗುತ್ತವೆ ಬಳ್ಳಾರಿ ಕೈಫಿಯೆತ್ತು.ಬಾಲದ ಹನುಮಪ್ಪ ನಾಯಕನ ಕಾಲವನ್ನು 1567 ಎಂದು ತಿಳಿಸುತ್ತದೆ ಆದರೆ ಶಿರಗುಪ್ಪ (ತಾ) ಶಿಲಿಗೇರಿ ಶಾಸನವು ಬಾಲದ ಹನುಮಪ್ಪನಿಗೆ ಸೇರಿದ್ದು ಅದರ ಕಾಲ ಕ್ರಿ.ಶ. 1537 ಆಗಿದೆ. ಆದ್ದರಿಂದ ಬಾಲದ ಹನುಮಪ್ಪನು ಕ್ರಿ.ಶ. 1537 ರಿಂದಲೂ ಆಳ್ವಿಕೆ ಮಾಡುತ್ತಿದ್ದ ಎಂದು ಹೇಳಬಹುದು.

ಬಳ್ಳಾರಿ ಪಾಳೆಯಗಾರರು ವೀರಶೈವ ಧರ್ಮೀಯರು. ಆ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು ಎಂದು ಹೇಳಲಾಗಿದೆ.ಕುರುಗೊಡು ಕೈಫಿಯೆತ್ತುಗಳು ಆದರೆ ಬಳ್ಳಾರಿ ಕೈಫಿಯತ್ತು ಈ ಪಾಳೇಗಾರರು ಮೂಲತಃ ಹಂಡೆ ಕುರುಬ ಜಾತಿಯವರೆಂದು ಸ್ಪಷ್ಟವಾಗಿ ಹೇಳಿವೆ. ಮೂಲತಃ ಹಂಡೆ ಕುರುಬ ವಂಶದವರಾಗಿದ್ದ ಇವರು ವಿಜಾಪುರದ ಬಾದಷಾಹನ ಕೃಪೆಯಿಂದ ರಾಜ್ಯ ಸ್ಥಾಪಿಸಿದರು ನಂತರ ಇವರ ವಂಶ ರಾಜವಂಶವಾಯಿತು. ಇವರು ರಾಜರಾದ ಮೇಲೆ ತಮ್ಮ ಜಾತಿಯನ್ನು ಉದಾತ್ತೀಕರಿಸಿಕೊಳ್ಳಲು ಒಂದು ಹಂತದಲ್ಲಿ ವೀರಶೈವ ಧರ್ಮವನ್ನು ಸ್ವೀಕರಿಸಿ, ನಂತರ ವೀರಶೈರಾದರು ಎನ್ನಬಹುದು. ಹೀಗೆ ಬಳ್ಳಾರಿ ಪಾಳೇಗಾರರು ಮೂಲತಃ ಹಂಡೆ ಕುರುಬರೇ ಆಗಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಈ ಪಾಳೆಯಗಾರರು ಕ್ರಿ.ಶ. 1500 ರಿಂದ 1775 ರವರೆಗೆ ಸುಮಾರು 275 ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಸೊನ್ನಲಿಗೆಯ ಸಿದ್ಧರಾಮೇಶ್ವರರನ್ನು ತಮ್ಮ ಆರಾಧ್ಯದೈವ ಎಂದು ಸ್ವೀಕರಿಸಿ ಕುರುಬ ಸಂಪ್ರದಾಯಗಳನ್ನು ಬಿಡದೆ ಉದಾರ ನೀತಿ, ಜನೋಪಕಾರಿ ಕಾರ್ಯಗಳಿಂದ ಪ್ರಸಿದ್ಧರಾಗಿ ವೀರಶೈವ ಧರ್ಮಕ್ಕೆ ನಿಷ್ಠರಾಗಿ ಎಲ್ಲಾ ಧರ್ಮಗಳನ್ನು ಗೌರವಿಸಿ ಕರ್ನಾಟಕದ ಪಾಳೆಯಗಾರರ ಇತಿಹಾಸದಲ್ಲಿ ತಮ್ಮ ದೇ ಆದ ಕೊಡುಗೆಗಳನ್ನು ಬಿಟ್ಟು ಹೋಗಿದ್ದಾರೆ.

ಶಂಭಾ ಜೋಷಿ ಹೇಳುವಂತೆ "ವೀರಶೈವ ಲಿಂಗಾಯಿತ ಪಂಥ ಒಂದು ಪ್ರಸಾರದ ಧರ್ಮವಾಗಿರುವುದರಿಂದ ಕುರುಬ, ರೆಡ್ಡಿ ಒಕ್ಕಲಿಗರಂತಹ ಅನೇಕ ಉಪಜಾತಿಗಳು ಆ ಧರ್ಮದಲ್ಲಿ ಸೇರಿಹೋದವು. ಲಿಂಗಾಯಿತ ಪಂಥದಲ್ಲಿ ಸೇರಿಹೋದ ಪ್ರಾಚೀನ ಜಾತಿಗಳ ಜನರ ಹೆಸರು ಇಂದಿಗೂ ಅಸ್ಪಷ್ಟ ಕೇಳಿಬರುತ್ತದೆ " ಬಳ್ಳಾರಿ ಪಾಳೆಯಗಾರರ ವಿಷಯದಲ್ಲಿಯೂ ಶಂಭಾ ಜೋಷಿಯವರ ಹೇಳಿಕೆಯನ್ನು ಗಮನಿಸಬೇಕಾಗುತ್ತದೆ.

ಇಂದೋರಿನ ಹೋಳ್ಕರ ಅರಸು ಮನೆತನ: ಮಹಾರಾಷ್ಟ್ರದ ಇಂದೋರಿನ ಹೋಳ್ಕರ ಅರಸು ಮನೆತನ ಕುರುಬ (ಧನಗರ) ಸಮುದಾಯಕ್ಕೆ ಸೇರಿದುದು. ಮಲ್ಹಾರಿರಾವ್ ಈ ಅರಸು ಮನೆತನದ ಸಂಸ್ಥಾಪಕ. ತದನಂತರದಲ್ಲಿ ಅಹಲ್ಯಾದೇವಿಯು ಈ ಮನೆತನದ ಜನಪ್ರಿಯ ರಾಣಿಯಾಗಿ ಮೂವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದಳು. ವಿ.ಆರ್. ಹನುಮಂತಯ್ಯನವರು ಹೇಳುವಂತೆ " ಈಕೆಯ ನ್ಯಾಯೈಕಪರಾಯಣತೆ, ನಿಷ್ಪಕ್ಷಪಾತ ದೋರಣೆ, ಪರೋಪಕಾರ, ರಾಜಕಾರ್ಯ ನಿರ್ವಾಹಕ ಶಕ್ತಿ, ದಕ್ಷತೆ, ಶಾಂತಿ, ಸಹನೆಗಳನ್ನು ಕಂಡ ಜನ ಹಿಂದೆ ಇಂಥವರು ಇರಲಿಲ್ಲವೆಂದು ಮುಂದೆ ಬರಲಾರದೆಂದೂ ಭಾವಿಸಿಕೊಂಡು, ಈಕೆ ದೈವಾಂಶಸ್ವರೂಪಿಣಿ ಎಂಬಂತೆ 'ದೇವಿ ಅಹಲ್ಯಾಬಾಯಿ' ಎಂದು ಸಂಬೋಧಿಸತೊಡಗಿದರು. ಈಗಲೂ ಈಕೆಯನ್ನು ದೇವತೆಯೆಂದು ಪೂಜಿಸುವರು" (ಕುರುಬ ಚರಿತ್ರೆ ಪುಟ93).

ಹೆಗ್ಗಡ ದೇವನ 'ಕೋಟೆ ಅರಸರು : ಕರ್ನಾಟಕದಲ್ಲಿ ಹೆಗ್ಗಡೆ ಎಂಬುದು ಕುರುಬರಿಗೆ ಇರುವ ಪರ್ಯಾಯ ನಾಮವಾಗಿದೆ. ಪ್ರಾಚೀನ ಹಾಗೂ ಮಧ್ಯ ಕಾಲದಲ್ಲಿ ಹೆಗ್ಗಡೆ ಎಂಬುದು ಆಡಳಿತದ ಪದನಾಮವಾಗಿತ್ತು. ಆ ಕಾಲದಲ್ಲಿ ಹೆಗ್ಗಡೆಯು ಪೆರ್ಗಡೆ, ಹಿರಿಯ ಹೆಗ್ಗಡೆ, ಹೆರ್ಗ್ಗಡೆ, ಪೆರ್ಗಡೆಕಾರಿ, ಪೆರ್ಗಡೆತನ, ಪುರವೆರ್ಗಡೆ ಎಂಬ ಉಲ್ಲೇಖಗಳನ್ನು ಶಾಸನದಲ್ಲಿ ಕಾಣುತ್ತೇವೆ. ಉದಾ.ಮಾರಮಯ್ಯಂ ಪೆರ್ಗಡೆ ತನಂಗೆಯ್ಯ ಎಂಬ ಉಲ್ಲೇಖವನ್ನು ಕ್ರಿ.ಶ. 1252 ರ ಶಾಸನವೊಂದು ತಿಳಿಸುತ್ತದೆ. ಆದ್ದರಿಂದ ಹೆಗ್ಗಡೆ, ನಗರದ ಅಥವಾ ಒಂದು ಪ್ರದೇಶದ ಮುಖ್ಯ ಅಧಿಕಾರಿ ಎಂದು ಹೇಳಬಹುದು. ಇಂತಹ ಅಧಿಕಾರಿಗಳನ್ನು ನೇಮಕ ಮಾಡಲು ಯಾವುದೇ ಜಾತಿ ಅಥವಾ ಸಮುದಾಯ ಅಡ್ಡಿಯಾಗುತ್ತಿರಲಿಲ್ಲ. ಇದಕ್ಕೆ ಕುರುಬ ಸಮುದಾಯದವರೂ ಹೊರತಾಗಿರಲಿಲ್ಲ. ಕುರುಬ ಸಮುದಾಯಕ್ಕೆ ಸೇರಿದ ದೇವ ಎಂಬಾತನು ಆನೆಗೊಂದಿ ಅರಸರ ಬಳಿ ಪೆರ್ಗಡೆಯಾಗಿದ್ದನು ಎಂದು ಬುಕಾನನು ತಿಳಿಸಿದ್ದಾನೆ. ಅವನು ದಾಖಲಿಸಿರುವಂತೆ-

"ಆನೆಗೊಂದಿ ರಾಜರ ಸಹೋದರನಾಗಿದ್ದ ದೇವ ಹೆಗ್ಗಡೆಯು ತನ್ನ ಅಣ್ಣನೊಂದಿಗೆ ಮನಸ್ತಾಪ ಮಾಡಿಕೊಂಡು ತನ್ನ ಅಲ್ಪ ಪರಿವಾರದೊಡನೆ ಮೈಸೂರು ಸೀಮೆಗೆ ಬರುತ್ತಾನೆ. ಇಲ್ಲಿ ಕಾಡಿನ ಮಧ್ಯ ಒಂದು ನಿರ್ದಿಷ್ಟ ಪ್ರದೇಶವನ್ನು ಆಯ್ಕೆ ಮಾಡಿಕೊಂಡು ತನ್ನ ಸಂರಕ್ಷಣೆಗಾಗಿ ಒಂದು ಸಾಧಾರಣ ಕೋಟೆಯನ್ನು ಕಟ್ಟಿಸಿಕೊಂಡನು. ಅದನ್ನು ಅವನು ಹೆಗೋಡುಪುರ ಎಂದು ಕರೆದನು. ಒಂದು ದಿನ ಆತನು ಈ ಪ್ರದೇಶವನ್ನು ಅಭಿವೃದ್ಧಿ ಪಡಿಸಬೇಕು ಮತ್ತು ತನಗೊಂದು ರಾಜ್ಯ ಸ್ಥಾಪಿಸಬೇಕೆಂಬ

ಬಯಕೆಯಿಂದ ಅರಣ್ಯ ಪ್ರದೇಶವನ್ನು ಶುದ್ಧಗೊಳಿಸಿ ಪಟ್ಟಣ ನಿರ್ಮಾಣ ಮಾಡಿ ಬೇರೆ ಕಡೆಯಿಂದ ಜನರನ್ನು ಕರೆ ತಂದು ಅವರಿಗೆ ಸಹಾಯ ಮಾಡಿದನು. ತನ್ನ ಬಳಿ ಇದ್ದ ಸಂಪತ್ತಿನಿಂದ ಆ ಸ್ಥಳದಲ್ಲಿಯೇ ಏಳುಸುತ್ತಿನ ಕಂದಕಗಳಿಂದ ಕೂಡಿದ ಬಲಾಢ್ಯ ಕೋಟೆಯನ್ನು ನಿರ್ಮಿಸಿ ಅದರೊಳಗಡೆ ಸುಂದರವಾದ ಅರಮನೆ ಕಟ್ಟಿ ವಾಸಿಸತೊಡಗಿದನು. ನಿಧಾನವಾಗಿ ಸೈನ್ಯ ಸಂಗ್ರಹ ಮಾಡಿ ಸಣ್ಣ ಪುಟ್ಟ ತುಂಡರಸರನ್ನು ಸೋಲಿಸಿ ಬಲಾಢ್ಯನಾಗಿ ಬೆಳೆದನು. ಹೀಗೆ ಹೆಗ್ಗೋಡುಪುರವನ್ನು ಹೆಗ್ಗಡೆ ದೇವನಕೋಟೆಯನ್ನಾಗಿ ಪರಿವರ್ತಿಸಿದನು." ಹೀಗೆ ಕುರುಬ ಸಮುದಾಯದಲ್ಲಿ ಬಲಾಢ್ಯ ಪಾಳೆಯಗಾರನಾಗಿ ಬೆಳದನು. ಒಟ್ಟಾರೆ ಹೇಳುವುದಾದರೆ, ಕುರುಬ ಜಾತಿಗೆ ಸೇರಿದ ದೇವ ಮಾದಲು ಆನೆಗೊಂದಿಯಲ್ಲಿ ಅಧಿಕಾರಿ (ಹೆಗ್ಗಡೆ)ಯಾಗಿದ್ದು ತನ್ನ ಶಕ್ತಿ ಸಾಮರ್ಥ್ಯದಿಂದ ಹೆಗ್ಗಡೆದೇವನ ಕೋಟೆ ಕಟ್ಟಿ ತನ್ನದೇ ಆದ ಮನೆತನವನ್ನು ಸ್ಥಾಪಿಸಿ ಆಳ್ವಿಕೆ ಮಾಡಿದನು. ನಂತರ ಇವನ ವಂಶದವರಿಗೆಲ್ಲಾ ಹೆಗ್ಗಡೆ ವಂಶವೆಂದೇ ಹೆಸರಾಯಿತು. ಕ್ರಮೇಣ ಇದು ಇವರು ಕುರುಬ ಜನಾಂಗಕ್ಕೆ ಸೇರಿದವರಾಗಿದ್ದುದ್ದರಿಂದ ಆ ಸಮುದಾಯದ ಬೆಡಗುಗಳಲ್ಲಿ ಒಂದಾಗಿ ಬದಲಾಯಿತು ಎಂದು ಹೇಳಲು ಸಾಧ್ಯವಿದೆ.

ದೇವನ ನಂತರ ಇವನ ಮಗ ನಿಂಗಪ್ಪ ಒಡೆಯ ರಾಜ್ಯವಾಳಿದನು. ಇವನು ಮೈಸೂರು ಅರಸನಾಗಿದ್ದ ಬೆಟ್ಟದ ಚಾಮರಾಜ ಒಡೆಯರಿಂದ ಪರಾಭವಗೊಂಡನು. ನಂತರ ಇವರು ಮೈಸೂರು ಒಡೆಯರಿಗೆ ಅಧೀನರಾದರು. ಕ್ರಮೇಣ ಇವರ ರಾಜ್ಯವನ್ನು ಹೈದರಾಲಿ ಗೆದ್ದು ಕೊಂಡು ಮೈಸೂರು ರಾಜ್ಯದಲ್ಲಿ ವಿಲೀನಗೊಳಿಸಿದನು.

ಶೂದ್ರವರ್ಗಕ್ಕೆ ಸೇರಿದ ಕುರುಬ ಜನಾಂಗದವರಿಗೆ ವಿಜಯನಗರದಂತಹ ಬಹುದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಇದ್ದರೂ ಆ ಜನಾಂಗಕ್ಕೆ ಚರಿತ್ರೆಯಲ್ಲಿ ಸರಿಯಾದ ಸ್ಥಾನ ದೊರಕಬೇಕಾಗಿದೆ. ವಿಜಯನಗರ ಕಾಲದಲ್ಲಿ ಉದಯವಾದ ಸಣ್ಣ ಪುಟ್ಟ ಮನೆತನಗಳೂ ಶೂದ್ರ ವರ್ಗಕ್ಕೆ ಸೇರಿದ್ದರೂ ಅವುಗಳ ವ್ಯವಸ್ಥಿತ ಅಧ್ಯಯನವಾಗಬೇಕಾಗಿದೆ. ಆ ಮನೆತನಗಳು ತಮ್ಮ ಮೂಲ ಜಾತಿಯನ್ನು ಮರೆಮಾಚಿ ತಮ್ಮ ವೃತ್ತಿಯಿಂದ ಕ್ಷತ್ರಿಯರಾಗಿ ಸಮಾಜದಲ್ಲಿ ತಮ್ಮ ಸ್ಥಾನವನ್ನು ಉದಾತ್ತೀಕರಿಸಿಕೊಳ್ಳುವುದಕ್ಕೋಸ್ಕರ್ ಬೇರೆ ಧರ್ಮವನ್ನು ಅಪ್ಪಿಕೊಂಡದ್ದು ಅಂದಿನ ಸಾಮಾಜಿಕ ಅಗತ್ಯತೆಗೆ ತಕ್ಕುದಾಗಿದೆ ಎನ್ನಬಹುದು. ಆದ್ದರಿಂದ ಕುರುಬ ಸಮುದಾಯಕ್ಕೆ ಸೇರಿದ ರಾಜಮನೆತನಗಳು ಮತ್ತು ಶ್ರೇಷ್ಠ ವ್ಯಕ್ತಿಗಳ ವ್ಯವಸ್ಥಿತ ಅಧ್ಯಯನವಾದರೆ ಇಡೀ ಭಾರತಾದ್ಯಂತ ವ್ಯಾಪಿಸಿರುವ ಈ ಜನಾಂಗಕ್ಕೆ ನ್ಯಾಯ ಸಂದಂತಾಗುತ್ತದೆ.

**ಆಕಾರ ಗ್ರಂಥಗಳು**

1. ಕರ್ನಾಟಕ ಸಂಸ್ಕ್ರತಿಯ ಪೂರ್ವ ಪೀಠಿಕೆ -ಶಂಭಾ ಜೋಷಿ
2. ಹಾಲುಮತ ದರ್ಶನ
3. ಡಾ.ಎಫ್ .ಟಿ ಹಳ್ಳಿಕೇರಿ ಸಂಪಾದಿತ ಹಾಲುಮತ ಅಧ್ಯಯನ 2010 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
4. ಶಂಭಾ ಜೋಷಿ, ಶಂಭಾ ಕೃತಿ ಸಂ.3,ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
5. ಹನುಮಂತಯ್ಯ ವಿ.ಆರ್.,ಕುರುಬರ ಚರಿತ್ರೆ, ಪ್ರತಿಭಾ ಪ್ರಕಾಶನ,ಪುಟ12, ಮೈಸೂರು 1999
6. ರಾಜಶೇಖರಪ್ಪ ಬಿ.,ಹಾಲತೊರೆ (ಸಂ) ಎಂ ಕಲಿಯಪ್ಪ,ಪುಟ 282,ದಾವಣಗೆರೆ 2003.
7. Gustove appert –the original inhabitants of india p.216
8. Robert sewell-A for Goten empire, 3rd chapter p27-28ಅನ್ನಪೂರ್ಣ
9. ಗೋಸ್ಬಾಳ,ಹಾಲುಮತ ಕಿರಣ,2014, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ,ಹೊಸಪೇಟೆ.
10. ಒಡೆಯರ್ ಡಿ.ಹೆಗ್ಗಡೆ,ಹಾಲುಮತ ಕುರುಬ ಜನಾಂಗದ ಇತಿಹಾಸ, 2005,ಅಖಿಲಾ ಏಜನ್ಸೀಸ್,ಮೈಸೂರು.